# ಏದೇನ್ ತೋಟದ ನಾಲ್ಕು ನದಿಗಳು

## ಅಧ್ಯಯನ # 26




## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 26

# ಏದೆನ್ ತೋಟದ ನಾಲ್ಕು ನದಿಗಳು

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಇಂದು ನಾವು ಸತ್ಯವೇದದಲ್ಲಿರುವ ಒಂದು ಸರಳವಾದ ಭಾಗವನ್ನು ಧ್ಯಾನಿಸೋಣ ಮತ್ತು ಅದರಲ್ಲಿ **ಮರೆಯಾಗಿರುವ ಸತ್ಯವನ್ನು** ಮತ್ತು ಅದರಲ್ಲಿರುವ **ಆಶ್ಚರ್ಯಕರವಾದ ಅರ್ಥವನ್ನು** ನೋಡೋಣ!

ನಾವು ವೇದ ಭಾಗವನ್ನು ಓದೋಣ –

### ಆದಿಕಾಂಡ 2:10-14

**"ಏದೆನ್ ಸೀಮೆಯಲ್ಲಿ ಒಂದು ನದಿ ಹುಟ್ಟಿ ಆ ವನವನ್ನು ತೋಯಿಸುತ್ತಿತ್ತು. ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು. ಮೊದಲನೆಯದರ ಹೆಸರು ಪೀಶೋನ್; ಅದು ಬಂಗಾರ ದೊರಕುವ ಹವೀಲ ದೇಶವನ್ನೆಲ್ಲಾ ಸುತ್ತುವದು. ಆ ದೇಶದ ಬಂಗಾರವು ಶ್ರೇಷ್ಠವಾದದ್ದು; ಅಲ್ಲಿ ಬದೋಲಖಧೂಪವೂ ಗೋಮೇಧಿಕರತ್ನವೂ ಸಿಕ್ಕುತ್ತವೆ. ಎರಡನೆಯ ನದಿಯ ಹೆಸರು ಗೀಹೋನ್; ಅದು ಕೂಷ್ ದೇಶವನ್ನೆಲ್ಲಾ ಸುತ್ತುವದು. ಮೂರನೆಯ ನದಿಯ ಹೆಸರು ಹಿದ್ದೆಕೆಲ್; ಅದು ಅಶ್ಶೂರ್ ದೇಶದ ಮುಂದೆ ಹರಿಯುವದು. ನಾಲ್ಕನೆಯದು ಯೂಫ್ರೇಟೀಸ್ ನದಿ."**

ಇಲ್ಲಿ ನಾವು ನೋಡುವುದೇನೆಂದರೆ.....

**"....ಒಂದು ನದಿ ಏದೆನ್ ಸೀಮೆಯಲ್ಲಿ ಹುಟ್ಟಿ ಅಲ್ಲಿಂದ ನಾಲ್ಕು ಶಾಖೆಗಳಾಗಿ ಹರಿಯಿತು"**

**ಇದರ ವಿಷಯ ಏನು ?**

**ಇದು ಒಂದು ಭೌಗೋಳಿಕ ಅಂಶ ಮಾತ್ರವೇ?**

**ಅಲ್ಲದೆ ಇದರಲ್ಲಿ ಆಳವಾದ ವಿಷಯ ನಾವು ಅರ್ಥ ಮಾಡಿಕೊಳ್ಳುವಂಥಹದ್ದು ಏನಾದರು ಉಂಟೇ?**

ಸತ್ಯವೇದದ ವಿದ್ಯಾರ್ಥಿಗಳಾಗಿ ನಾವು ಅರಿತಿರುವುದೇನೆಂದರೆ (ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು) ದೇವರ ವಾಕ್ಯಗಳು ಆಶ್ಚರ್ಯಕರ ರಹಸ್ಯಗಳಿಂದ ತುಂಬಿವೆ ಎಲ್ಲಿಯವರೆಗೆಂದರೆ ದೇವರ ಕೃಪೆಯಿಂದ ನಮಗೆ ಪ್ರಕಟವಾಗುವವರೆಗೆ.

**(ಧರ್ಮೋಪದೇಶಕಾಂಡ 29:29)**

**ಯುಗಯುಗಾಂತರಗಳ ದೇವರ ದೈವಿಕ ಯೋಜನೆಯಿಂದ ಸತ್ಯದ ಒಂದು ದೊಡ್ಡ ಆಭರಣವನ್ನು ಇಲ್ಲಿ ಬಚ್ಚಿಡಲಾಗಿದೆ!**

**ಆ ಸತ್ಯ ಏನು ? ನಾವು ನೋಡೋಣ**

ಹೌದು ! ಮತ್ತೊಮ್ಮೆ ವಚನ ಓದೋಣ –

**ಆದಿಕಾಂಡ 2:10**

"ಏದೆನ್ ಸೀಮೆಯಲ್ಲಿ ಒಂದು ನದಿ ಹುಟ್ಟಿ ಆ ವನವನ್ನು ತೋಯಿಸುತ್ತಿತ್ತು. ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು."



**ಮೊಟ್ಟ ಮೊದಲನೆಯದಾಗಿ** ನಾವು ನೋಡುವುದೇನೆಂದರೆ

**ಈ ನದಿ, ಏದೆನ್‌ನಿಂದ ಆಚೇ ಹರಿಯಿತು!**

ಇದು ಕೇವಲ ನೇರವಾದ (literal)ವಿಷಯವಾಗಿದ್ದರೆ, ಒಂದು ನಿರ್ದಿಷ್ಟ ನದಿಯು ಏದೆನ್ ತೋಟದಿಂದ ಹರಿಯಿತು ಮತ್ತು ಶೀಘ್ರದಲ್ಲೇ ನಾಲ್ಕು ಶಾಖೆಗಳಾದವು ಎಂಬುದನ್ನು ಹೊರತುಪಡಿಸಿ ಇದರಲ್ಲಿ ಕಲಿಯುವಂಥದ್ದು ಬಹಳ ಕಡಿಮೆ ಇದೆ!

ಆದರೆ ನಮ್ಮೆಲ್ಲರಿಗು ಗೊತ್ತಿರುವ ಹಾಗೆ ಸತ್ಯವೇದದಲ್ಲಿ ದೇವರು ತಮ್ಮ ಮಾತನ್ನು ಕೇವಲ ನೇರವಾದ ಭಾಷೆಗಿಂತ(literally language) ಹೆಚ್ಚಿನ ರೀತಿಯಲ್ಲಿ ಪ್ರಕಟಪಡಿಸುತ್ತಾರೆ.

ಅವರು ಸಾಂಕೇತಿಕ ಮತ್ತು ಸಾಮ್ಯಗಳ ಭಾಷೆ ಉಪಯೋಗಿಸುತ್ತಾರೆ !

**ಇಲ್ಲಿ ಸಾಂಕೇತಿಕವಾಗಿ ಏನಾದರೂ ಇದೆಯೇ?**

ನಾವು ನೋಡೋಣ !

ನದಿ ಎಂದರೆ ದೊಡ್ಡ ನೀರಿನ ಹರಿವು.

**ಹಾಗಾದರೆ "ನೀರು' ಸತ್ಯವೇದದಲ್ಲಿ ಏನನ್ನು ಸೂಚಿಸುವುದು ?**

ಇದಕ್ಕೆ ಉತ್ತರವನ್ನು ಓದೋಣ–

**ಪ್ರಕಟಣೆ 17:15**

**"ಇನ್ನೂ ಆ ದೇವದೂತನು ನನಗೆ ಹೇಳಿದ್ದು – ಆ ಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ? ಅವು ಪ್ರಜೆ ಸಮೂಹ, ಜನ, ಭಾಷೆಗಳನ್ನು ಸೂಚಿಸುತ್ತದೆ."**

ಹೌದು! ನೀರು ಎಂದರೆ ...."ಅವು ಪ್ರಜೆ, ಸಮೂಹ, ಜನ, ಭಾಷೆಗಳನ್ನು ಸೂಚಿಸುತ್ತದೆ"

ಸಂಕ್ಷಿಪ್ತವಾಗಿ "ನೀರು" ಇಡೀ ಮನುಕುಲವನ್ನು ಸೂಚಿಸುವುದು !!



## ಈಗ ಇಡೀ ಮನುಕುಲ ಏದೆನ್ನಿಂದ ಹೊರಟುಬಂತೇ?

ಇದಕ್ಕೆ ಉತ್ತರವನ್ನು ಓದೋಣ –

**ಆದಿಕಾಂಡ 3:22-24**

**"ಇದರಿಂದ ಇವನು ಕೈಚಾಚಿ ಜೀವವೃಕ್ಷದ ಫಲವನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಾರದು ಅಂದುಕೊಂಡು ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು. ಅದಲ್ಲದೆ ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ಆತನು ಏದೆನ್ ವನದ ಪೂರ್ವದಿಕ್ಕಿನಲ್ಲಿ ಕೆರೂಬಿಯರನ್ನೂ ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನೂ ಇರಿಸಿದನು."**

ಹೌದು! ಆದಾಮನು ಮತ್ತು ಹವ್ವಳು ಏದೆನ್ನಿಂದ ಹೊರಗೆ ಬಂದರು ಮತ್ತು ಅವರಲ್ಲಿ ಇಡೀ ಮನುಕುಲ ಇತ್ತು ಎಂದು **ಅಪೋಸ್ತಲರು 17:26** ರಲ್ಲಿ ನಾವು ನೋಡುತ್ತೇವೆ – **"ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸಮಾಡಿ..."**



## ಹೌದು ! ಹೀಗೆ ಇದರಲ್ಲಿ ನಮಗೆ ಒಂದು ಸುಂದರವಾದ ಚಿತ್ರ- ಒಂದು ಛಾಯಾಯಾಗಿ ಹೊರಹೊಮ್ಮುತ್ತಿದೆ.

### ಈ ಛಾಯೆಯು ಏನನ್ನು ಸೂಚಿಸುವುದು ?

ನದಿ ಇಡೀ ಮನುಕುಲವನ್ನು ಸೂಚಿಸುವುದು ಮತ್ತು ನಂತರದಲ್ಲಿ ಉಂಟಾಗುವ ನಾಲ್ಕು ಶಾಖೆಗಳು ಮನುಕುಲವು ನಾಲ್ಕು ಗುಂಪುಗಳಾಗಿ ವಿಭಾಗವಾಗುವುದರ ಚಿತ್ರಣವಾಗಿದೆ.

**ಇದು ಯಾವಾಗ ಆಗುವುದು ?**

**ಮತ್ತು ಇದರ ಅರ್ಥವೇನು ?**

ನಾವು ಕೆಳಗಿನ ವಾಕ್ಯದಲ್ಲಿನ ದೇವರ ದೈವೀಕ ಯೋಜನೆಯನ್ನು ಓದಿದ್ದೇವೆ–

### 1 ಕೊರಿಂಥದವರಿಗೆ 15:21-22

**"ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನ ವುಂಟಾಗುವುದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು."**

ಹೌದು ! ನಮಗೆ ಗೊತ್ತು ಹೇಗೆ ಎಲ್ಲಾ ಮನುಷ್ಯರು ಇಂದು ಆದಾಮ ಮತ್ತು ಹವ್ವಳಿಂದ ಪಿತ್ರಾರ್ಜಿತವಾಗಿ ಪಡೆದುಕೊಂಡಿರುವ ಪಾಪದ ಸ್ಥಿತಿ ಮತ್ತು ಮರಣದಂಡನೆಯಿಂದಾಗಿ ಇಂದು ಸಾಯುತ್ತಿರುವರೋ ಕಲ್ವಾರಿ ಶಿಲುಬೆಯ ಮೇಲಿನ ಯೇಸುವಿನ ಮರಣದಿಂದಾಗಿ ಇಡೀ ಮನುಕುಲ ವಿಮೋಚಿಸಲ್ಪಟ್ಟಿದೆ ಆದಕಾರಣ ಎಲ್ಲರೂ ಮತ್ತೆ ಜೀವಿತರಾಗುವರು ಎಂಬ ಭರವಸೆಯನ್ನು ವಾಕ್ಯಗಳು ನೀಡುತ್ತವೆ. ಮರಣದಿಂದ ಪುನರುತ್ಥಾನ ವುಂಟಾಗುವುದು ಎಂಬ ಮಹಾಸತ್ಯವನ್ನು ಸತ್ಯವೇದ ಹೇಳುತ್ತದೆ !

ಈಗ ಹಳೆಯ ಒಡಂಬಡಿಕೆಯಲ್ಲಿ ಇದೇ ವಿಷಯವನ್ನು ಕುರಿತು ಓದೋಣ–

**ಕೀರ್ತನೆಗಳು 90:3**

**"ನೀನು ಮನುಷ್ಯನನ್ನು ನಾಶನಕ್ಕೆ (ಮರಣಕ್ಕೆ) ತಿರುಗಿಸಿ-- ಮನುಷ್ಯರ ಮಕ್ಕಳೇ, ಹಿಂತಿರುಗಿರಿ (ಪುನರುತ್ಥಾನ ಹೊಂದಿರಿ) ಎಂದು ಹೇಳುತ್ತೀ;" (ಪವಿತ್ರ ಬೈಬಲ್)**

ಹೌದು ! ಮರಣದಿಂದ ಎಲ್ಲರಿಗೂ ಒಂದು ಪುನರುತ್ಥಾನ ಇರುವುದು !!

ನಾವು ವಚನ **22**ರಲ್ಲಿ ನಿಲ್ಲಿಸಿದ್ದು ಎಂಬುದನ್ನು ಜ್ಞಾಪಕ ಮಾಡಿಕೊಳ್ಳಿರಿ.

ಈಗ ವಚನ-**23** ಓದೋಣ

**1 ಕೊರಿಂಥದವರಿಗೆ 15:23**

**"ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು;....."**

ಹೌದು! ಪುನರುತ್ಥಾನ ಒಂದು ಕ್ರಮದಲ್ಲಿರುವುದು !!

ಇಂದು ಆ ಕ್ರಮದ ಬಗ್ಗೆ ಒಂದು ನೋಟ ನೋಡೋಣ !

ನಾಲ್ಕು ಶಾಖೆಗಳು ಯೇಸುವಿನ ಎರಡನೆಯ ಬರುವಿಕೆಯಲ್ಲಿ ಮೂರನೆಯ ಲೋಕದಲ್ಲಿ ನಡೆಯಲಿರುವ ನಾಲ್ಕು ವಿಧವಾದ ಪುನರುತ್ಥಾನಗಳನ್ನು ಸೂಚಿಸುತ್ತದೆ.


**"ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶ ಮಂಡಲವನ್ನೂ** (ಕಣ್ಣಿಗೆ ಕಾಣದ ಆತ್ಮೀಕ ಆಳ್ವಿಕೆ) **ನೂತನಭೂಮಂಡಲವನ್ನೂ** (ಕಣ್ಣಿಗೆ ಕಾಣುವಂತಹ ಮಾನವ ಆಳ್ವಿಕೆ) **ಎದುರುನೋಡುತ್ತಾ ಇದ್ದೇವೆ:..."**

ಪಾಠವನ್ನು ಶುರುಮಾಡುವ ಮೊದಲು ನಾವೆಲ್ಲರು ನದಿಯ ಒಂದು ನಕ್ಷೆಯನ್ನು ನೋಡೋಣ !

**ದಯವಿಟ್ಟು**

**ನದಿಯ ಮತ್ತು ಅದರ ನಾಲ್ಕು ಶಾಖೆಗಳ ನಕ್ಷೆಯನ್ನು**

**ಗಮನಿಸಿ**


ಏದೆನ್ ತೋಟ
ಆರನೇ ದಿನ
ಹವ್ವಳು–ಆದಾಮನು
ಮೊದಲನೇ ಲೋಕ
ಏಳನೇ ದಿನದ ಪ್ರಾರಂಭ
"ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ... " ಎಂಬುದರ ನೆರವೇರಿಕೆಯ ಅವಧಿ.
ಎರಡನೇ ಲೋಕ
"...ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು" ಎಂಬುದರ ನೆರವೇರಿಕೆಯ ಅವಧಿ.
ಮೂರನೇ ಲೋಕ
ಯೂಫ್ರೆಟೀಸ್
ಹಿದ್ದೆಕೆಲ್ (ಟೈಗ್ರಿಸ್ ನದಿ)
ಗೀಹೋನ್
ಪೀಶೋನ್
4
3
2
1
A
B

ಅಧ್ಯಯನವನ್ನು ಆರಂಭಿಸುವ ಹಾಗೆ ನಾವೆಲ್ಲರು ಮೊದಲನೆಯ ನದಿಯ ಬಗ್ಗೆ ಓದೋಣ –



## ನದಿ # 1

### ಆದಿಕಾಂಡ 2:11-12

**"ಮೊದಲನೆಯದರ ಹೆಸರು ಪೀಶೋನ್; ಅದು ಬಂಗಾರ ದೊರಕುವ ಹವೀಲ ದೇಶವನ್ನೆಲ್ಲಾ ಸುತ್ತುವದು. ಆ ದೇಶದ ಬಂಗಾರವು ಶ್ರೇಷ್ಠವಾದದ್ದು;...."**

ಈ ಮೊದಲನೆಯ ನದಿ ನಾವು ಈಗಾಗಲೇ ಕಲಿತಿರುವ ಹಾಗೆ ಮೊದಲನೆಯ ವಿಧವಾದ ಪುನರುತ್ಥಾನವನ್ನು ಹೊಂದಿಕೊಳ್ಳುವಂತಹ ಗುಂಪಾಗಿದೆ.

**ಯಾರು ಈ ವರ್ಗದವರು ?**

ಇದಕ್ಕೆ ಉತ್ತರವನ್ನು ಓದೋಣ–

### ಪ್ರಕಟಣೆ 20:6

**"ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ; ಆದರೆ ಅವರು ದೇವರಿಗೂ ಕ್ರಿಸ್ತನಿಗೂ ಯಾಜಕರಾಗಿ ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು"**

**ಹೌದು! ಇವರೇ ಕ್ರಿಸ್ತನ ಸಭೆ- ಕ್ರಿಸ್ತನ ಶರೀರ !**

**"ಒಳ್ಳೆಯ ಚಿನ್ನ" ಯಾವುದನ್ನು ಪ್ರತಿನಿಧಿಸುತ್ತದೆ ?**

ದೇವ ದರ್ಶನ ಗುಡಾರದಲ್ಲಿ ಪವಿತ್ರ ಮತ್ತು ಮಹಾ ಪವಿತ್ರ ಸ್ಥಳದಲ್ಲಿದ್ದ ಎಲ್ಲಾ ವಸ್ತುಗಳು ಚಿನ್ನದಿಂದ ಮಾಡಲ್ಪಟ್ಟವುಗಳಾಗಿದ್ದವು !!


### ವಿಮೋಚನಕಾಂಡ 25:11-12,24,31

**"ಚೊಕ್ಕಬಂಗಾರದ ತಗಡುಗಳನ್ನು ಅದರ ಹೊರಗಡೆಯೂ ಒಳಗಡೆಯೂ ಹೊದಿಸಬೇಕು. ಅದರ ಮೇಲೆ**

**ಸುತ್ತಲೂ ಚಿನ್ನದ ಗೋಟು ಕಟ್ಟಿಸಬೇಕು. ನಾಲ್ಕು ಬಂಗಾರದ ಬಳೆಗಳನ್ನು ಎರಕಹೊಯಿಸಿ ಅದರ ನಾಲ್ಕು ಮೂಲೆಗಳಲ್ಲಿ ಅಂದರೆ ಒಂದೊಂದು ಕಡೆಯಲ್ಲಿ ಎರಡೆರಡು ಬಳೆಗಳನ್ನು ಇಡಬೇಕು.**

**"ಅದಕ್ಕೆ ಚೊಕ್ಕಬಂಗಾರದ ತಗಡುಗಳನ್ನು ಹೊದಿಸಿ ಸುತ್ತಲೂ ಚಿನ್ನದ ಗೋಟು ಕಟ್ಟಿಸಬೇಕು. ಮೇಜಿನ ಸುತ್ತಲು ಅಂಗೈ ಅಗಲದ ಅಡ್ಡಪಟ್ಟಿಯನ್ನು ಮಾಡಿಸಿ ಅದಕ್ಕೂ ಚಿನ್ನದ ಗೋಟು ಕಟ್ಟಿಸಬೇಕು."**

**"ಮತ್ತು ಚೊಕ್ಕಬಂಗಾರದ ದೀಪಸ್ತಂಭವನ್ನು ಮಾಡಿಸಬೇಕು. ಅದರ ಬುಡವನ್ನೂ ಕಂಬವನ್ನೂ ನಕಾಸಿಕೆಲಸದಿಂದ ಮಾಡಿಸಬೇಕು. ಈ ದೀಪಸ್ತಂಭವೆಲ್ಲಾ ಅಖಂಡವಾಗಿ ಪುಷ್ಪಪಾತ್ರೆಗಳಂತೆಯೂ ಪುಷ್ಪಪಗಳಂತೆಯೂ ಅಲಂಕಾರವಾಗಿ ಕೆತ್ತಿರಬೇಕು."**




ಹೌದು! ಈ ಎಲ್ಲಾ "ಚಿನ್ನವು" ದೈವೀಕ ಸ್ವಭಾವವನ್ನು ಸೂಚಿಸುತ್ತದೆ. ದೇವರಲ್ಲಿರುವ ಜೀವಸ್ವಭಾವ ಅದು

ಹಾಗೆಯೇ ಯಾರೆಲ್ಲಾ ಈ ಮೊದಲನೆಯ ಪುನರುತ್ಥಾನವನ್ನು ಹೊಂದಿಕೊಳ್ಳುವರೋ ಅವರು ಅತ್ಯುನ್ನತ ಜೀವದ ಮಟ್ಟವಾದ–

ದೈವೀಕಸ್ವಭಾವಕ್ಕೆ – ದೇವರು ಮತ್ತು ಯೇಸುವಿಗಿರುವಂತಹ ಅಮರತ್ವದ ಸ್ವಭಾವಕ್ಕೆ ಪುನರುತ್ಥಾನಗೊಳ್ಳುತ್ತಾರೆ.

ಇದು ಒಂದು ವಿಸ್ಮಯಕರ ಮತ್ತು ಸತ್ಯವೇದದಲ್ಲಿ ನೀಡದೇ ಹೋಗಿದ್ದರೆ ಖಂಡಿತವಾಗಿ ನಂಬಲು ಅಸಾದ್ಯವಾದ ವಿಷಯ !!!!

ಹೌದು ದೈವೀಕ ಯೋಜನೆಯ ನಕ್ಷೆಯಲ್ಲಿ **"k"** ಗೆರೆ( ತಲ) "ಅಮರತ್ವ"ದ ದೈವೀಕ ಸ್ವಭಾವವನ್ನು ಸೂಚಿಸುತ್ತದೆ.




ಇದು ಸಭೆಗೆ ನೀಡಲಾಗಿರುವ ಒಂದು ವಾಗ್ದಾನ ಇದರ ಬಗ್ಗೆ ವಾಕ್ಯದಲ್ಲಿ ಓದೋಣ –

**ರೋಮಾಪುರದವರಿಗೆ 2:7**

**"ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು."**

ಇನ್ನೊಂದು ವಾಕ್ಯ ನೋಡೋಣ –

**2 ಪೇತ್ರ 1:4**

**"ನೀವು ಲೋಕದಲ್ಲ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ........"**

ಹೌದು ! ಇವೆಲ್ಲ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು –ಸಾಧ್ಯವಾದ ಅತಿ ಉನ್ನತ ಮಟ್ಟದ ಜೀವ – ದೇವರಿಗಿರುವ ಸ್ವಂತ ಸ್ವಭಾವ !

ಅವರನ್ನು **"ಚಿಕ್ಕ ಹಿಂಡು"** ಎಂದು ಕರೆಯಲಾಗುವುದು **(ಲೂಕ 12:32)** ಯಾಕಂದರೆ ಅವರು ಸ್ಥಿರವಾದ ಪೂರ್ವನಿರ್ಧರಿತ 144000 ಸಂಖ್ಯೆ ಇದರ ಬಗ್ಗೆ ಓದೋಣ –

**ಪ್ರಕಟಣೆ 14:1/7:4**

**"ನಾನು ನೋಡಲಾಗಿ ಯಜ್ಞದ ಕುರಿಯಾದಾತನು ಚೀಯೋನ್ ಪರ್ವತದ ಮೇಲೆ ನಿಂತಿರುವದನ್ನು ಕಂಡೆನು.**

**ಆತನ ಜೊತೆಯಲ್ಲಿ ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಮಂದಿ ಇದ್ದರು. ಅವರವರ ಹಣೆಯ ಮೇಲೆ ಆತನ ಹೆಸರೂ ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು."**

**"ಮುದ್ರೆ ಒತ್ತಿಸಿಕೊಂಡವರ ಸಂಖ್ಯೆಯು ಪ್ರಸಿದ್ಧವಾದಾಗ ನಾನು ಕೇಳಿದೆನು. ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವರು ಒತ್ತಿಸಿಕೊಂಡರು. ಅವರ ಸಂಖ್ಯೆ ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಮಂದಿ."**



ಹೌದು ಇವರನ್ನು ಲೋಕದ ಸಕಲ ಜನಾಂಗಗಳವರಿಂದ ಆರಿಸಲಾಗುತ್ತದೆ !!

**ಪ್ರಕಟಣೆ 5:9**

**"........ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ...."**

ಹೌದು ! ಇವರು ಲೋಕದ ಎಲ್ಲಾ ಜನಾಂಗಗಳ ಪ್ರತಿನಿಧಿಗಳಾಗಿರುವರು.

ಆದ್ದರಿಂದ ಯೇಸು ತಮ್ಮ ಶಿಷ್ಯರಿಗೆ ಹೀಗೆಂದು ಕಟ್ಟಳೆ ಕೊಡುವುದನ್ನು ನೋಡುತ್ತೇವೆ–

**ಅಪೋಸ್ತಲರು 1:8**

**"ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೆಮಿನಲ್ಲಿಯೂ ಎಲ್ಲಾ ಯುದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು."**

ಹೌದು ! "ಕರೆ" ಮತ್ತು "ಸುವಾರ್ತೆ" ಭೂಲೋಕದ ಕಟ್ಟಕಡೆಯವರೆಗೂ ಹೋಗಿ ಸೇರಬೇಕು ಮತ್ತು ಒಂದೊಂದು ಜನಾಂಗದ ಜನರಿಂದಲೂ ಕೆಲವರು ಆಯ್ಕಗೊಂಡು ಬೆಳೆಯಬೇಕು !!

ಹೌದು ! ಯೇಸು ಇದನ್ನು ಕುರಿತು ಮಾತನಾಡಿರುವುದನ್ನು ಓದೋಣ –

**ಮತ್ತಾಯನು 13:9 - "ಕಿವಿಯುಳ್ಳವನು ಕೇಳಲಿ ಅಂದನು...."**

ಇವರುಗಳೆಲ್ಲ ದೇವರ ಸೃಷ್ಟಿಯಲ್ಲಿ "ಪ್ರಥಮ ಫಲಗಳು" ಎಂದು ಕರೆಯಲ್ಪಡುವರು, ಇದರ ಬಗ್ಗೆ ಓದೋಣ –

**ಯಾಕೋಬ 1:18**

**"....ನಾವು ಆತನ ಸೃಷ್ಟಿಗಳಲ್ಲಿ ಪ್ರಥಮಫಲದಂತಾದೆವು."**



### ಇದರ ಅರ್ಥವೇನು?

ಹೇಗೆ ಸುಗ್ಗಿಗೆ ತಯಾರಾಗಿರುವ ಹೊಲದ ಬೆಳೆಯ ಪ್ರಥಮ ಫಲಗಳು ಉತ್ತಮವಾದ ಫಲಗಳನ್ನು ಸೂಚಿಸುತ್ತದೋ ಹಾಗೆಯೆ ಈ ವರ್ಗದವರು

ವಿಶ್ವಾಸದಲ್ಲಿ, ವಿಧೆಯತೆಯಲ್ಲಿ ಮತ್ತು ಗುಣಗಳಲ್ಲಿ ಉನ್ನತ ಫಲಗಳನ್ನು ಹೊಂದಿರುವವರು ಎಂಬುದನ್ನು ಸೂಚಿಸುತ್ತದೆ ಆದ್ದರಿಂದ ಅವರು ದೇವರು ನೀಡಬಹುದಾದ ಅತ್ಯಂತ ಉನ್ನತ ಜೀವವನ್ನು ಪ್ರಥಮ ಪುನರುತ್ಥಾನದಲ್ಲಿ ಹೊಂದಿಕೊಳ್ಳುವರು.

ಅವರಲ್ಲಿ ವಿಶ್ವಾಸದ, ವಿಧೇಯತೆಯ ಮತ್ತು ಗುಣಗಳ ಫಲಗಳು ಬಹಳ ಕಷ್ಟಕರ ಸನ್ನಿವೇಶದಲ್ಲಿ ಮತ್ತು ಅತ್ಯಂತ ಹಿಂಸೆಯ ಒತ್ತಡದ ಮಧ್ಯದಲ್ಲಿ ಇಡೀ ಲೋಕ ಕರುಡುತನದಲ್ಲಿ ಮತ್ತು ಕಾರ್ಗತ್ತಲಲ್ಲಿ ಇರುವಂತಹ ಸಂದರ್ಭದಲ್ಲಿ ಬೆಳೆಯುವುದು. **(ಯೆಶಾಯ 60:2)**

ಈಗ ನಾವು ಎರಡನೆಯ ನದಿಗೆ ಹೋಗೋಣ–



## ನದಿ # 2

**ಆದಿಕಾಂಡ 2:13**

**"ಎರಡನೆಯ ನದಿಯ ಹೆಸರು ಗೀಹೋನ್; ಅದು ಕೂಷ್ ದೇಶವನ್ನೆಲ್ಲಾ ಸುತ್ತುವದು."**

ಹೌದು ! ಈ ಎರಡನೆಯ ನದಿ ಗೀಹೋನ್ ಎರಡನೆಯ ಪುನರುತ್ಥಾನವನ್ನು ಹೊಂದಿಕೊಳ್ಳುವ ವರ್ಗದವರನ್ನು ಸೂಚಿಸುವುದು.

**ಯಾರು ಈ ವರ್ಗದವರು ?**

ಇವರು ಯಾರೆಂದು ಕಂಡುಕೊಳ್ಳುವುದಕ್ಕೆ ಮೊದಲು ಇಥಿಯೋಪಿಯಾದ ಮುಖ್ಯತ್ವವನ್ನು ಅರ್ಥಮಾಡಿಕೊಳ್ಳೋಣ –

ಈ ನದಿ ಎಲ್ಲಿಗೆ ಹರಿದು ಕೊಂಡು ಹೋಗುವುದು ಎಂಬುದನ್ನೂ ಅರ್ಥಮಾಡಿಕೊಳ್ಳೋಣ !




**"ಇಥಿಯೋಪಿಯಾ ದೇಶ"**

ಇದು ಆಫ್ರೀಕ ಖಂಡದ ಒಂದು ಭಾಗ –
"ನೀಗ್ರೊಸ್" ಜನರು ವಾಸಮಾಡುವಂತ
ಒಂದು ಪ್ರದೇಶ – ಈ ಶಪಿಸಲ್ಪಟ್ಟ ಜನಾಂಗವು
ನೋಹನ ಕಿರಿ ಮಗ ಹಾಮನ ಮಗನಾದ
ಕಾನಾನನಿಂದ ಪ್ರಾರಂಭವಾಯಿತು.
ವಾಕ್ಯ ಓದೋಣ –

**ಆದಿಕಾಂಡ 9:24,25**
**"ನೋಹನು ಅಮಲಿಳಿದೆದ್ದು ಕಿರೀ ಮಗನು ಮಾಡಿದ್ದನ್ನು ತಿಳಿದು – ಕಾನಾನನು ಶಾಪಗ್ರಸ್ತನಾಗಲಿ. ಅವನು ತನ್ನ ಅಣ್ಣತಮ್ಮಂದಿರಿಗೆ ದಾಸಾನುದಾಸನಾಗಲಿ ಅಂದನು."**



ಹೌದು ! ಅವರು ಶಪಿಸಲ್ಪಟ್ಟವರು –

**".... ಅಣ್ಣತಮ್ಮಂದಿರಿಗೆ ದಾಸಾನುದಾಸರು.. "**

ಆದ್ದರಿಂದ "**ಇಥಿಯೋಪಿಯಾ ದೇಶ**"ದ ಗುಣಲಕ್ಷಣವೇನೆಂದರೆ ಆ ದೇಶದ ಎಲ್ಲಾ ಜನರೂ ಸೇವಕರೂ ಗುಲಾಮರೂ ಆಗಿರುವರು.

ಆದ್ದರಿಂದ ಈ ಎರಡನೆಯ ನದಿ ಗಿಹೋನ್ ಸಂಪೂರ್ಣವಾಗಿ "ಸೇವಕರ ವರ್ಗ" ದವರನ್ನು ಸೂಚಿಸುತ್ತದೆ.

**ಅವರು ಯಾರು ?**

ಹೌದು ! ಅವರ ಬಗ್ಗೆ ಹೇಳಿರುವುದನ್ನು ವಾಕ್ಯದಲ್ಲಿ ಓದೋಣ –

**ಪ್ರಕಟಣೆ 7:9**

**"…..ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ……"**

ಹೌದು ! ಅವರು ಯಾರೆಂದರೆ ಮಹಾಸಮೂಹ ವರ್ಗದವರು

ಇವರು "ಸೇವಕರು" ಸತ್ಯವೇದದಲ್ಲಿ ನಾವು ಓದೋಣ –

**ಪ್ರಕಟಣೆ 7:15**

**"ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು ಆತನ ಆಲಯದಲ್ಲಿ ಹಗಲಿರುಳು ಆತನ ಸೇವೆಮಾಡುತ್ತಾ ಇದ್ದಾರೆ;……"**

ಹೌದು ! ಇವರು ಯೇಸುವಿನ ಮತ್ತು ಸಭೆಯ ಸೇವಕರಾಗಿರುವರು, ವಾಕ್ಯ ಓದೋಣ –

**"ಆಲಯದಲ್ಲಿ ಹಗಲಿರುಳು ಆತನ ಸೇವೆಮಾಡುತ್ತಾ ಇದ್ದಾರೆ;……"**

ಇವರು ಯಾರೆಂದರೆ

"ಕರೆಯಲ್ಪಟ್ಟವರು, ಆಯಲ್ಪಟ್ಟವರು ಆದರೆ ನಂಬಿಗಸ್ತರಲ್ಲದವರೂ ಹಾಗೂ ಮಗನ ಸಾರೂಪ್ಯದಲ್ಲಿ ಇಲ್ಲದವರೂ ಆಗಿರುವ ಕ್ರಿಸ್ತನ ಹಿಂಬಾಲಕರು. ಇವರು ಒಡಂಬಡಿಕೆಯನ್ನು ಮಾಡಿಕೊಂಡಿರುವ, ಆತ್ಮದಲ್ಲಿ ಹುಟ್ಟಿರುವ (**spirit begotten**) ಸಭೆಯ ಸದಸ್ಯರು, ಆದರೆ ಬಹುಮಾನವನ್ನು ಕಳೆದು ಕಳೆದುಕೊಳ್ಳುವವರು ಎಂದು ವಾಕ್ಯದಲ್ಲಿ ಓದುತ್ತೇವೆ–

**ಯೆರೆಮೀಯ 8:20**

**"ಸುಗ್ಗಿ ತೀರಿತು, ಹಣ್ಣಿನ ಕಾಲ ಮುಗಿಯಿತು, ನಮಗೆ ಉದ್ಧಾರವೇ ಆಗಲಿಲ್ಲ."**

**1 ಕೊರಿಂಥದವರಿಗೆ 3:15**

**"ಒಬ್ಬನು ಕಟ್ಟಿದ್ದು ಸುಟ್ಟುಹೋದರೆ ಅವನಿಗೆ ಸಂಬಳವು ನಷ್ಟವಾಗುವದು; ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿ ಕೊಂಡವನ ಹಾಗಿರುವನು."**



**ಹೌದು ! "ಚಿಕ್ಕ ಹಿಂಡಿನಲ್ಲ" ಸದಸ್ಯರಾಗುವ ದೈವೀಕ ಸ್ವಭಾವವನ್ನು ಹೊಂದಿಕೊಂಡು ಕ್ರಿಸ್ತನೊಂದಿಗೆ ಆಳ್ವಿಕೆಗೆ ಮಾಡುವಂತಹ ಅತ್ಯಂತ ಮಹೋನ್ನತವಾದ ಹಾಗೂ ಶ್ರೇಷ್ಠವಾದ ಬಹುಮಾನವನ್ನು ಪಡೆದುಕೊಳ್ಳಲು ವಿಫಲರಾಗುವರು.**

ಹೌದು !

**".....ಅವನಿಗೆ ಸಂಬಳವು ನಷ್ಟವಾಗುವದು"**

ಅತ್ಯಂತ ಉನ್ನತವಾದ ಬಹುಮಾನವಾದ ಮೇಲಾದ ಕರೆಯನ್ನು ಕಳೆದುಕೊಳ್ಳುವರು ಅವರ ಪುನರುತ್ಥಾನ ಎರಡನೆಯದಾಗಿರುವುದು "ಮದಲಗಿತ್ತಿಯ" ಮೊದಲನೆ ಪುನರುತ್ಥಾನವಾದ ಮೇಲೆ ಇವರು ಪುನರುತ್ಥಾನ ಹೊಂದುವರು. ಇದನ್ನು ವಾಕ್ಯದಲ್ಲಿ ಓದೋಣ –

**ಕೀರ್ತನೆಗಳು 45:14**

**"ಆಕೆಯು ಬೂಟೇದಾರೀ ಕಸೂತಿಕೆಲಸದ ವಸ್ತ್ರಗಳನ್ನು ಧರಿಸಿಕೊಂಡು ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಗೆ ಬರುವಳು."**

ಹೌದು ! ಈ ವರ್ಗದ ಪುನರುತ್ಥಾನ, ಮೊದಲನೆಯ ಪುನರುತ್ಥಾನವನ್ನು "ಹಿಂಬಾಲಿಸುವುದು" ಮತ್ತು ಪರಲೋಕದ ಪುನರುತ್ಥಾನವಾಗಿರುವುದು– ಆದರೆ ಅವರು ದೈವೀಕ ಸ್ವಭಾವವನ್ನು ಹೊಂದಿಕೊಳ್ಳಲಾರರು.

**ಮರ್ತ್ಯ ಆತ್ಮೀಕ ಜೀವಿಗಳಾಗಿರುವ (mortal spirit beings) ದೂತರ ಸ್ವಭಾವಕ್ಕೆ ಅವರಿಗೆ ಪುನರುತ್ಥಾನವಾಗುವುದು.**

ಈ "ಸೇವಕ ವರ್ಗದ" ಕೆಲಸ ಏನಾಗಿರುವುದು ?

ಸತ್ಯವೇದ ವಚನ ಏನು ಹೇಳುವುದೆಂದು ನೋಡೋಣ ಪ್ರಕಟಣೆ **7:15** –

**"ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು ಆತನ ಆಲಯದಲ್ಲಿ ಹಗಲಿರುಳು ಆತನ ಸೇವೆ ಮಾಡುತ್ತಾ ಇದ್ದಾರೆ...."**


## ಇದರ ಅರ್ಥವೇನು?

"ಸಭೆಯ ವರ್ಗ"– ಕ್ರಿಸ್ತ(**the Christ**) –ದೇವರ ಆಲಯ ಇವರಿಗೆ ಮಾಡುವ ಒಂದು ನಿರಂತರವಾದ ಮತ್ತು ಶಾಶ್ವತವಾದ ಸೇವೆಯನ್ನು ಇದು ಸೂಚಿಸುತ್ತದೆ.

ಅವರು ಆಡಳಿತದ ಆತ್ಮೀಕ ಮತ್ತು ಭೂಲೋಕ ಹಂತಗಳ ನಡುವೆ ಸಮನ್ವಯ ಸಾಧಿಸುತ್ತಾರೆ. ಅವರು ಸಂದೇಶಗಳನ್ನು ಕ್ರಿಸ್ತನಿಂದ ಪಿತೃಗಳಿಗೆ ತಲುಪಿಸುವರು, ಅದೇ ರೀತಿಯಲ್ಲಿ ಪಿತೃಗಳಿಂದ ಕ್ರಿಸ್ತನಿಗೂ ತಲುಪಿಸುವರು, ಹೇಗೆಂದರೆ ಯಾಕೋಬನ ಕನಸಿನಲ್ಲಿ ನೋಡುವಂತೆ –

**ಆದಿಕಾಂಡ 28:12**

**"ಆ ರಾತ್ರಿ ಅವನು ಕನಸುಕಂಡನು. ಆ ಕನಸಿನಲ್ಲಿ ಒಂದು ನಿಚ್ಚಣಿಗೆ ನೆಲದ ಮೇಲೆ ನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು."**



ನಮ್ಮ ಕರ್ತನಾದ ಯೇಸುವಿನ ಹಾಗೂ ಸಭೆಯ ದೈವೀಕ ಸರ್ಕಾರದ ಸರ್ಕಾರಿ ನೌಕರರು ಎಂಬುದಾಗಿ ಇವರಿಗೆ ಹೇಳಬಹುದು.

ಆದರೆ ಇವರಿಗೆ ಮಾಡಲು ಇನ್ನೊಂದು ಸೇವೆಯೂ ಇರುವುದು ವಾಕ್ಯದಲ್ಲಿ ಓದೋಣ –

**ಯೆಶಾಯ 30:21**

**"ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೆ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವುದು."**

**ಈ ವಾಕ್ಯದ ಅರ್ಥವೇನು ?**

ಇದು ಮಹಾ ಸಮೂಹದ ಇನ್ನೊಂದು ಸೇವೆಯನ್ನು ಸೂಚಿಸುವುದು. ಅದೇನೆಂದು ವಾಕ್ಯದಲ್ಲಿ ಓದೋಣ –

**ಯೆಶಾಯ 11:9**

**"ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವದಿಲ್ಲ, ಯಾರೂ ಹಾಳುಮಾಡುವದಿಲ್ಲ..."**

ಹೌದು ! ಈ ವಾಕ್ಯವು ದೇವರ "ಪವಿತ್ರ ಪರ್ವತ"ದ ಅಥವ "ದೇವರ ರಾಜ್ಯ"ದ ಸ್ಥಿತಿಯನ್ನು ಸೂಚಿಸುತ್ತದೆ.

**"ಯಾರೂ ಕೇಡು ಮಾಡುವುದಿಲ್ಲ, ಯಾರು ಹಾಳುಮಾಡುವುದಿಲ್ಲ..."**

**ಇದು ಹೇಗೆ ಇರುವುದು ?**



ಸಾಮಾನ್ಯವಾಗಿ ಇಂದು ಅಪರಾಧದಿಂದ ರಕ್ಷಣೆಯನ್ನು ಪೊಲೀಸ್ ಪಡೆಯಿಂದ ನೀಡಲಾಗುತ್ತಿದೆ.

ಆದರೆ ಅಪರಾಧ ಸಂಭವಿಸುವುದನ್ನು ನಿರೀಕ್ಷಿಸಲು ಅಥವಾ ತಡೆಯಲು ಪೋಲೀಸರಿಂದಲೂ ಸಹ ಸಾಧ್ಯವಾಗುತ್ತಿಲ್ಲ.



**ಆದರೆ ದೇವರ ರಾಜ್ಯದಲ್ಲಿ ಪೋಲಿಸ್ ಪಡೆ ಮನಷ್ಯರಾಗಿರುವುದಿಲ್ಲ ಆದರೆ ಕಣ್ಣಿಗೆ ಕಾಣದಂತಹ ಆತ್ಮೀಕ ಜೀವಿಗಳಾಗಿರುತ್ತಾರೆ.**







ಇವರು ದುಷ್ಕೃತ್ಯ ಮಾಡುವವರನ್ನು ಚಿಂತನೆಯ ಹಂತದಲ್ಲಿಯೇ – ವ್ಯಕ್ತಿಯು ತಪ್ಪು ಮಾಡುವ ಬಗ್ಗೆ ಯೋಚಿಸುತ್ತಿರುವಾಗಲೇ ಎಚ್ಚರಿಸಲು ಮತ್ತು ನಿಯಂತ್ರಿಸಲು ಮೊದಲಿಗೆ ಮಾಂಸದಲ್ಲಿ ಅಭಿವ್ಯಕ್ತಿ ಪಡಿಸಿಕೊಳ್ಳುವ ಶಕ್ತಿಯನ್ನು ಬಳಸಿಕೊಳ್ಳುತ್ತಾರೆ.

**ಏಕೆಂದರೆ ಪ್ರತಿಯೊಂದು ಕ್ರಿಯೆ ಅಥವ ಮಾತು ಆರಂಭವಾಗುವುದು ಮೊದಲು ಯೋಚನೆಯಲ್ಲಿ !**

ಆದರೆ ಕ್ರಮೇಣವಾಗಿ ಅದೇ ವ್ಯಕ್ತಿಗೆ ಮಾಂಸರೂಪದಲ್ಲಿ ಮತ್ತೆ ಮತ್ತೆ ತೋರ್ಪಡಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ, ಕೇವಲ ಕೇಳಿಸುವಂಥಹ ಮಾರ್ಗದರ್ಶನ ನೀಡುವ ಧ್ವನಿ ಸಾಕು ಮನುಷ್ಯರನ್ನು ಹತೋಟಿಯಲ್ಲಿ ಇಡುವುದಕ್ಕೆ.

ಇದನ್ನು ಓದೋಣ **ಯೆಶಾಯ 30:21** - **"....ಇದೇ ಮಾರ್ಗ, ಇದರಲ್ಲೆ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವುದು."**

**ದೇವರ ರಾಜ್ಯದಲ್ಲಿ ಈ "ಪೋಲೀಸ್" ಕೆಲಸವನ್ನು ಈ ಮಹಾ ಸಮೂಹದವರು ಮಾಡುವರು. ಅವರಿಗೆ ಮನುಷ್ಯನಿಗಿರುವ ಎಲ್ಲಾ ಬಲಹೀನತೆಗಳ ಬಗ್ಗೆ ಒಳ್ಳೆ ಅರಿವಿರುವುದು. ಹೇಗೆಂದರೆ ಅವರು ಮೊದಲು ಮನುಷ್ಯರಾಗಿದುದ್ದರಿಂದ ಮಾನವ ಯೋಚನೆಗಳ ಮತ್ತು ಬಲಹೀನತೆಗಳ ಕಾರ್ಯವಿಧಾನದ ಬಗ್ಗೆ ಒಳ್ಳೆಯ ಅರಿವಿರುವುದು !!**

ಹೀಗೆ ಕೆಟ್ಟ ಯೋಚನೆಯ ಪೂರ್ವ ನಿರೀಕ್ಷಣೆಯಿಂದಾಗಿ ದೇವರ ರಾಜ್ಯದಲ್ಲಿ– ನಿಜವಾಗಿಯೂ ಬರೆದಿರುವ ಹಾಗೆ

**"ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡು ಮಾಡುವುದಿಲ್ಲ, ಯಾರು ಹಾಳುಮಾಡುವುದಿಲ್ಲ...**

ಈಗ ನಾವು ಮೂರನೆಯ ನದಿ ನೋಡೋಣ –




**ಆದಿಕಾಂಡ 2:14**

**"....ಮೂರನೆಯ ನದಿಯ ಹೆಸರು ಹಿದ್ದೆಕೆಲ್; ಅದು ಅಶ್ಶೂರ್ ದೇಶದ ಮುಂದೆ ಹರಿಯುವದು."**

ಮೂರನೆಯ ನದಿ "ಹಿದ್ದೆಕೆಲ್" ಅಥವ ಟೈಗ್ರಿಸ್ ಇದು ಮೂರನೆಯ ಪುನರುತ್ಥಾನ ಹೊಂದುವವರನ್ನು ಪ್ರತಿನಿಧಿಸುತ್ತದೆ.

## ಯಾರು ಈ ತರಗತಿಯವರು ?

ನಾವು ಮೊದಲು "ಅಸಿರಿಯಾ" **ಸಂಕೇತದ** ಮುಖ್ಯತ್ವವನ್ನು ಅರ್ಥಮಾಡಿಕೊಳ್ಳುವ ಮೂಲಕ ಇದನ್ನು ಕಂಡುಹಿಡಿಯೋಣ.

## "ಅಸಿರಿಯಾ"

ಇದು **ಅಬ್ರಾಮನು** ಹೊರಟು ಬಂದಂತಹ ಮೆಸೊಪ್ಪೊತಾಮ್ಯ ಅಥವಾ ಕಲ್ದೀಯ ಪಟ್ಟಣವನ್ನು ಸೂಚಿಸುತ್ತದೆ. ವಾಕ್ಯದಲ್ಲಿ ನೋಡೋಣ,

**ಅಪೋಸ್ತಲರು 7:2**

**"...... ಅಬ್ರಹಾಮನು ಖಾರಾನಿನಲ್ಲಿ ವಾಸಮಾಡಿದಕ್ಕಿಂತ ಮುಂಚೆ ಮೆಸೊಪೊತಾಮ್ಯದಲ್ಲಿದ್ದಾಗ ಪ್ರಭಾವಸ್ವರೂಪನಾದ ದೇವರು ಅವನಿಗೆ ಕಾಣಿಸಿಕೊಂಡು..."**

ಹೌದು ಈ ಮೂರನೆಯ ನದಿ "**ಹಿದ್ದೆಕೆಲ್**" (**ಟೈಗ್ರಿಸ್**) **ಇದು** ಅಬ್ರಹಾಮನೂ ಸಹ ಸೇರಿರುವ ಒಂದು ವರ್ಗವನ್ನು ಸೂಚಿಸುತ್ತದೆ.

## ಅವರು ಯಾರು ?

ಈ ಒಂದು ವರ್ಗದವರ ಬಗ್ಗೆ **ಇಬ್ರಿಯ 11ನೇ ಅಧ್ಯಾಯದಲ್ಲಿ** ಹೇಳಲಾಗಿದೆ. ಯೇಸುವಿನ ಮೊದಲನೇ ಬರುವಿಕೆಗೂ ಮೊದಲು **ದೇವರಿಗೆ ನಂಬಿಗಸ್ತರಾಗಿದ್ದ ಜನರೇ ಅವರು.**

ಹೌದು ! ಅವರನ್ನು **ಪಿತೃಗಳೆಂದು** ಕರೆಯಲಾಗುತ್ತದೆ –

**ಇಬ್ರಿಯ 11:2**

**"ನಮ್ಮ ಪೂರ್ವಿಕರು ನಂಬಿಕೆಯುಳ್ಳವರಾಗಿದ್ದದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು."**

ಅವರು ಯಾರಂದರೆ ಹೇಬೆಲನಿಂದ ಮೊದಲುಗೊಂಡು ಸ್ನಾನಿಕನಾದ ಯೋಹಾನನವರೆಗಿನ ನಂಬಿಗಸ್ತರು.



ಇವರು ಯಾವ ರೀತಿಯ ಪುನರುತ್ಥಾನವನ್ನು ಹೊಂದುವರು?

ನಾವು ವಾಕ್ಯದಲ್ಲಿ ಓದೋಣ –

**ಇಬ್ರಿಯ 11:35 – "ಶ್ರೇಷ್ಠಪುನರುತ್ಥಾನವನ್ನು ಹೊಂದುವುದಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ...."**

ಹೌದು ಅವರು "ಶ್ರೇಷ್ಠಪುನರುತ್ಥಾನವನ್ನು" ಹೊಂದುವರು !

ಈ ತರಗತಿಯವರು ಹೊಂದುವ "ಶ್ರೇಷ್ಠ ಪುನರುತ್ಥಾನ" ಎಂದರೆ ಏನು ?

ಇದನ್ನು ಸ್ಪಷ್ಟವಾಗಿ ವಾಕ್ಯದಲ್ಲಿ ನೋಡೋಣ –

**ಇಬ್ರಿಯ 11:40**

**"ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು."**

ಇಲ್ಲಿ ನೋಡುವುದಾದರೆ, "ನಮ್ಮ" ಹಾಗೆಯೆ "ಅವರು" ಸಹ ಪರಿಪೂರ್ಣರಾಗಿ ಮಾಡಲ್ಪಡಬೇಕು. "ನಮ್ಮ" ಎಂಬ ತರಗತಿಯವರು ಇನ್ನೂ ಉನ್ನತವಾದ "ಶ್ರೇಷ್ಠವಾದ ಭಾಗ್ಯವನ್ನು" ಹೊಂದುವರು.

**ಯಾರು ಈ 'ನಮ್ಮ' ಎಂಬ ತರಗತಿಯವರು ?**

"ನಮ್ಮ" ಎಂಬ ತರಗತಿಯವರು ಎಂದರೆ "ಸಭೆ" ಇವರು ಪರಿಪೂರ್ಣತೆ ಹೊಂದುವರು– ದೈವೀಕ ಸ್ವಭಾವದಲ್ಲಿ ಆದರೆ "ಅವರು" ಎಂಬ ತರಗತಿಯವರು "ಪಿತೃಗಳು" ಇವರೂ ಸಹ ಪರಿಪೂರ್ಣತೆಯನ್ನು ಹೊಂದಿಕೊಳ್ಳುವರು ಆದರೆ ಮಾಂಸೀಕ ಸ್ವಭಾವದಲ್ಲಿ !!

ಹೌದು! ಈ ತರಗತಿಯವರು ಪುನರುತ್ಥಾನ ಹೊಂದಿದ ತಕ್ಷಣವೇ ಪರಿಪೂರ್ಣ ಮಾನವ ಸ್ವಭಾವ ಹೊಂದಿಕೊಳ್ಳುವರು ನಂತರ ಅವರು ಭೂಮಿಯ ಮೇಲಿನ ದೇವರ ರಾಜ್ಯದಲ್ಲಿ ಮನುಷ್ಯ ಆಡಳಿತಗಾರರಾಗಿರುವರು. ಇದನ್ನು ವಾಕ್ಯದಲ್ಲಿ ಓದೋಣ –

**ಕೀರ್ತನೆಗಳು 45:16**

**"ವಂಶಪಾರಂಪರ್ಯವಾಗಿ ಬಂದ ಸ್ಥಾನದಲ್ಲಿರುವದಕ್ಕೆ ನಿನಗೆ ಮಕ್ಕಳು ಹುಟ್ಟುವರು; ಅವರನ್ನು ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸುವಿ."**

ಹೌದು ! ಅವರನ್ನು ಆತನು ಜೀವಕ್ಕೆ ಪುನರುತ್ಥಾನಗೊಳಿಸಿದಾಗ, ಯೇಸುವಿನ "ಪಿತೃಗಳು" ಆತನಿಗೇ "ಮಕ್ಕಳಾಗುವರು",

ಹೌದು ! ಯೋಸೇಫ್, ಮೋಶೆ, ಅಬ್ರಹಾಮನು, ದಾನಿಯೇಲ್, ಸ್ನಾನಿಕನಾದ ಯೋಹಾನನು ಮತ್ತು ಎಲ್ಲಾ ಪ್ರವಾದಿಗಳು ದಾವಿದನು ಮುಂತಾದವರು – ರಾಜ್ಯದಲ್ಲಿ ಭೂಮಿಯನ್ನು ಆಳುವುದನ್ನು ಊಹಿಸಿಕೊಳ್ಳಿ !

**ಅವರು ಎಂತಹ ಶ್ರೇಷ್ಠ ಆಡಳಿತಗಾರರಾಗಿರುವರು !!**



ನಾವು ತಿಳಿದಿರುವಂತೆ ಈ ತರಗತಿಯಲ್ಲಿ ಸ್ನಾನಿಕನಾದ ಯೋಹಾನನು ಕೊನೆಯವನಾಗಿರುವನು.

**ಇವರಿಗಿಂತ ಮೊದಲನೆಯವರು ಯಾರು ಅಥವ ಈ ವರ್ಗದಲ್ಲಿ ಸ್ನಾನಿಕನಾದ ಯೋಹಾನನಿಗಿಂತ ಹಿಂದಿನವರು ಯಾರು?**

ಒಂದು ವೇಳೆ ಯೇಸುವಿನ ದಿಕ್ಷಾಸ್ನಾನಕ್ಕೆ ಮುಂಚಿತವಾಗಿ ಜೀವಿಸಿ ಮರಣ ಹೊಂದಿದ ಯೇಸುವಿನ ಸಾಕು ತಂದೆಯಾದ ಯೋಸೇಫನಾಗಿರಬಹುದು.

ಮಗು ಯೇಸುವನ್ನು, ಮರಿಯಳನ್ನು ನೋಡಿಕೊಳ್ಳುವದರಲ್ಲಿ ಆತನು ದೇವರಿಗೂ, ದೇವರ ವಾರ್ತೆಗೂ ಎಂತಹ ನಂಬಿಗಸ್ತಿಕೆಯನ್ನು ತೋರಿದನು!!

ತನಗೆಂದು ನಿಶ್ಚಯಿಸಿದ ಮರಿಯಳು ಮದುವೆಗೆ ಮೊದಲೇ ಗರ್ಭಿಣಿಯಾಗಿರುವುದು ಕಂಡುಬಂದರೂ, ಯೋಸೇಫನು ಎಂತಹ ನಂಬಿಕೆಯನ್ನು ತೋರಿದನು ನಾವು ವಾಕ್ಯದಲ್ಲಿ ಓದೋಣ –



**ಮತ್ತಾಯನು 1:18-25**

**"ಯೇಸು ಕ್ರಿಸ್ತನ ಜನನವು ಹೇಗಾಯಿತಂದರೆ – ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯಮಾಡಿರಲಾಗಿ ಅವರು ಕೂಡುವುದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ತಿಳಿದು ಬಂತು. ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು. ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲ ಕಾಣಿಸಿಕೊಂಡು – ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮನಿಂದಲೇ ಆದದ್ದು.**

**ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿಕಾಯುವನು ಅಂದನು. ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು ; ಆ ಮಾತು ಎನೆಂದರೆ – "ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಯಾನುವೇಲ್ ಎಂದು ಹೆಸರಿಡುವರು** ಎಂಬುದೇ." **ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ. ಆಗ ಯೋಸೇಫನು ನಿದ್ದೆ ತಿಳಿದೆದ್ದು ಕರ್ತನ ದೂತನು ಅಪ್ಪಣೆ ಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿ ಕೊಂಡನು. ಆದರೆ ಆಕೆಯು ಗಂಡು ಮಗುವನ್ನು ಹಡೆಯುವ ತನಕ ಆಕೆಯನ್ನು ಅರಿಯಲಿಲ್ಲ. ಮಗುವಿಗೆ ಯೇಸುವೆಂದು ಹೆಸರಿಟ್ಟನು."**

ಹೌದು ! ಯೇಸುವಿನ ಸಾಕು ತಂದೆಯಾದ ಯೋಸೇಫನು

- ಭೂಮಿಯಲ್ಲಿ ಆಳ್ವಿಕೆ ಮಾಡುವವರಲ್ಲಿ ಒಬ್ಬ ಸದಸ್ಯನಾಗಿರುವನು.
- ....ಆದರೆ ಅವರ ತಾಯಿಯಾದ ಮರಿಯಳು ಆತ್ಮೀಕ ಆಳ್ವಿಕೆಯಲ್ಲಿ ಒಬ್ಬ ಸದಸ್ಯಳಾಗಿರುವಳು ಎಂದು ನಂಬುತ್ತೇವೆ. ಯಾಕೆಂದರೆ "ಪಂಚಾಶತ್ತಮ" ದಿನದಲ್ಲಿ ಆಕೆಯೂ ಅಲ್ಲಿ ಇದ್ದು ಪವಿತ್ರಾತ್ಮನನ್ನು ಹೊಂದಿಕೊಂಡಳು ಎಂದು ವಾಕ್ಯದಲ್ಲಿ ಓದುತ್ತೇವೆ, **ಅಪೊಸ್ತಲರು** 1:14 –

**"ಇವರೆಲ್ಲರು ಏಕ ಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ...."**

**ಇವರು ಅತ್ಯಂತ ವಿಶೇಷವಾದ ವರ್ಗದವರಾಗಿದ್ದು ಅವರು ದೇವರ ರಾಜ್ಯದಲ್ಲಿ ಭೂಹಂತದ ಆಡಳಿತಗಾರರಾಗಿರುವರು.**

ಈಗ ನಾವು ಈ ವರ್ಗದವರನ್ನು ಕುರಿತು ಮತ್ತೊಂದು ವಿಷಯವನ್ನು ಓದೋಣ –

## ಅಪೊಸ್ತಲರು 2:17

**"ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯ ದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು"**

ಈ ವಾಕ್ಯವು ಲೋಕದವರು ಹೊಂದುವ "ಭೂಲೋಕ ರಕ್ಷಣೆ"ಯ ಕಾಲವನ್ನು ಸೂಚಿಸುವುದು.

ಈ ಒಂದು ವಾಕ್ಯವು ವಿಚಿತ್ರವಾಗಿ ಕಾಣಿಸುವುದು ಏಕೆಂದರೆ " ಹಿರಿಯರು" ಬರೀ ಕನಸುಗಳನ್ನು ಕಾಣುವದಕ್ಕಾಗಿ ನಿದ್ರಿಸುವವರಂತೆಯೂ, "ಯೌವನಸ್ಥರು" ಬರೀ ದರ್ಶನಗಳನ್ನು ನೋಡುವವರಂತೆಯೂ ತೋರುತ್ತದೆ!

ಈ ವಿಷಯದಲ್ಲಿ ಒಂದು "ಸ್ಥಿರತೆ" ಇದೆ !

**ಇದು ಯಾಕೆ ?**

ಯಾಕೆಂದರೆ ಈ " ಹಿರಿಯರು" ಮತ್ತು " ಯೌವನಸ್ಥರು" ಒಂದು ನಿರ್ಧರಿತ ವರ್ಗವನ್ನು ಸೂಚಿಸುತ್ತಾರೆ.

**ಹಿರಿಯರು" ಮತ್ತು " ಯೌವನಸ್ಥರು" ಯಾವುದನ್ನು ಅಥವ ಯಾರನ್ನು ಸೂಚಿಸುತ್ತಾರೆ ?**

ಇವರು ಬೇರೆ ಯಾರು ಅಲ್ಲ...... ಪ್ರವಾದಿಗಳು... ಮತ್ತು ಇದು ಅವರ ಅನುಭವಗಳನ್ನು ಕುರಿತು ಮಾತನಾಡುವುದು !

**"ಹಿರಿಯರಿಗೆ ಕನಸುಗಳು ಬೀಳುವವು"**

ಇದು ದೇವರು ಪ್ರವಾದಿಗಳಿಗೆ ಪ್ರಕಟಿಸಿದ ರಾಜ್ಯದ ವಾಗ್ದಾನಗಳ ಬಗ್ಗೆ ಅವರು ಬರೆದಿರುವದನ್ನು ಸೂಚಿಸುವುದು ಎಂದು ನಾವು ವಾಕ್ಯದಲ್ಲಿ ಓದುತ್ತೇವೆ,

**ಅಪೊಸ್ತಲರು 3:21**

**"ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ."**

ರಾಜ್ಯದ ಎಲ್ಲಾ ಆಶ್ಚರ್ಯಕರವಾದ ವಾಗ್ದಾನಗಳು ಆ ಕಾಲದಲ್ಲಿ ನಿಜವಲ್ಲದ್ದಾಗಿ ತೋರಿತು –

ಅವುಗಳೆಲ್ಲಾ ಕನಸುಗಳಂತಿದ್ದವು !

ಅದು ಹೇಗೆಂದು ಕೆಲವು ಉದಾಹರಣೆಗಳ ಮೂಲಕ ಕಲಿಯೋಣ –

**ಯೆಶಾಯ 11:6-8**

**"ತೋಳವು ಕುರಿಯ ಸಂಗಡ ವಾಸಿಸುವದು,....... ಕರುವೂ ಪ್ರಾಯದ ಸಿಂಹವೂ ಪುಷ್ಟ ಪಶುವೂ ಒಟ್ಟಿಗಿರುವವು.....ಇವುಗಳನ್ನು ಚಿಕ್ಕ ಮಗುವು ನಡಿಸುವದು."**



ಇಲ್ಲಿ ಯೆಶಾಯ ಪ್ರವಾದಿಯೂ ಸಿಂಹವು ಎತ್ತಿನಂತೆ ಹುಲ್ಲನ್ನು ತಿನ್ನುವ ಮತ್ತು ತೋಳವು ಕುರಿಮರಿ ಜೊತೆ ಇರುವ ಮತ್ತು ಹಾಲು ಕುಡಿಯುವ ಮಗು ಸರ್ಪಗಳೊಂದಿಗೆ ಆಟವಾಡುವ ಸ್ಥಿತಿಯನ್ನು ಕುರಿತು ಬರೆದಿರುವದನ್ನು ನೋಡುತ್ತೇವೆ. ಇವೆಲ್ಲ ಇಂದೂ ಸಹ ನಂಬಲು ಅಸಾಧ್ಯವಾದವುಗಳು !

ಯೆಶಾಯ ಇವುಗಳನ್ನು ಬರೆದ ಸಮಯದಲ್ಲಿ ಸಿಂಹವು ಮಾಂಸವನ್ನು ಮತ್ತು ಮನುಷ್ಯನನ್ನು ತಿನ್ನುತ್ತಿತ್ತು ಮತ್ತು ಕುರಿಮರಿಯು ತೋಳದ ಹೊಟ್ಟೆಯ ಒಳಗೆ ಆಹಾರವಾಗಿ ಸೇರುತ್ತಿತ್ತು!



**ಹೌದು ! ಕನಸಿನ ಹಾಗೆ- ಈ ಮಾತುಗಳೂ**

**ನಂಬಲು ಅಸಾಧ್ಯವಾಗಿದ್ದವು !**

ಮತ್ತೆ ನಾವು ಓದುತ್ತೇವೆ

**ಮೀಕ 4:3**

**"ಆತನು ಬಹು ರಾಷ್ಟ್ರದವರ ವ್ಯಾಜ್ಯಗಳನ್ನು ವಿಚಾರಿಸುವನು, ಪ್ರಬಲ ಜನಾಂಗಗಳಿಗೆ ನ್ಯಾಯತೀರಿಸುವನು....ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವದೇ ಇಲ್ಲ."**

ಇಲ್ಲಿ ನಾವು ನೋಡುವುದೇನೆಂದರೆ ಪ್ರವಾದಿಯಾದ ಮೀಕನು, "ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು" ಎಂಬ ಸ್ಥಿತಿ ಬಗ್ಗೆ ಬರೆದಿರುವದನ್ನು ನೋಡುತ್ತೇವೆ.

ಹೌದು ! ಯುದ್ಧಗಳಿಗೆಲ್ಲಾ ಒಂದು ಕೊನೆ !

ಮತ್ತು ಮುಂದುವರಿಸುತ್ತಾ ಇನ್ನು ಯುದ್ಧಾಭ್ಯಾಸವು ಇರುವುದಿಲ್ಲ

ಇದು ರಕ್ಷಣಾ ಪಡೆಗಳು ಇಲ್ಲದೇ ಹೋಗುವುವು ಎಂಬುದನ್ನು ಸೂಚಿಸುತ್ತದೆ.



ಸೇನಾದಳ, ನೌಕಾಪಡೆ ಮತ್ತು ವಾಯುಪಡೆ ಇಲ್ಲವಾಗುವವು. ಪ್ರವಾದಿ ಮೀಕ ಇದನ್ನು ಬರೆದ ಕಾಲದಲ್ಲಿ ಎಲ್ಲೆಡೆಯಲ್ಲೂ ಯುದ್ಧ ಮತ್ತು ನಾಶನವು ನಡೆಯುತ್ತಿತ್ತು.

**ಹೌದು ! ಕನಸಿನ ಹಾಗೆ- ಈ ಮಾತುಗಳೂ ಸಹ**

**ನಂಬಲು ಅಸಾಧ್ಯವಾಗಿದ್ದವು.**

ವಾಕ್ಯಗಳಲ್ಲಿ ಓದೋಣ

## ಯೆರೆಮಿಯ 16:19-21

**"....ಲೋಕದ ಕಟ್ಟಕಡೆಯಿಂದ ಜನಾಂಗಗಳು ನಿನ್ನ ಬಳಿಗೆ ಸೇರಿ – ನಮ್ಮ ಪಿತೃಗಳು ಶುದ್ಧ ಸುಳ್ಳನ್ನು, ಮಾಯವನ್ನು ಪ್ರಯೋಜನವಿಲ್ಲದವುಗಳನ್ನು ಪಾರಂಪರ್ಯವಾಗಿ ಹೊಂದಿದ್ದಾರೆ ಎಂದು ಅರಿಕೆಮಾಡುವರು. ಮನುಷ್ಯಮಾತ್ರದವನು ದೇವರುಗಳನ್ನು ಕಲ್ಪಿಸಿಕೊಳ್ಳಬಲ್ಲನೇ? ಇವು ದೇವರುಗಳೇ ಅಲ್ಲ......"**



ಇಲ್ಲಿ ಪ್ರವಾದಿಯಾದ ಯೆರೆಮೀಯನು ಲೋಕದಲ್ಲಿ ಇರುವ ಎಲ್ಲಾ ಅನ್ಯಜನರು ವಿಗ್ರಹ ಆರಾಧನೆಯನ್ನು ತ್ಯಜಿಸುವುದರ ಬಗ್ಗೆ ಬರೆದಿರುವದನ್ನು ನಾವು ನೋಡುತ್ತೇವೆ.

ಅವರು ತಮ್ಮ ಸಾಂಪ್ರದಾಯಿಕ ನಂಬಿಕೆಗಳನ್ನು ಮತ್ತು ಮೂಢನಂಬಿಕೆಗಳನ್ನು ಬಿಟ್ಟು ದೇವರ ಕಡೆಗೆ ಮನತಿರುಗುವದರ ಬಗ್ಗೆ ಬರೆದಿದ್ದಾರೆ.

ಹೌದು! ಯೆರೆಮಿಯನು ಈ ವಾಕ್ಯಗಳನ್ನು ಬರೆದಂತಹ ಕಾಲದಲ್ಲಿ ಎಲ್ಲೆಡೆ ಜನರು ಬಹಳ ವಿಗ್ರಹಾರಾಧನೆ ಮಾಡುತ್ತಿದ್ದರು, ಬೇರೆ ಬೇರೆ ದೇವರುಗಳನ್ನು ಸಂಪೂರ್ಣ ವೈರಾಗ್ಯದಿಂದಲೂ ಮೂಢ ನಂಬಿಕೆಗಳಿಂದ ಆರಾಧಿಸುತ್ತಿದ್ದರು.

**ಹೌದು ! ಕನಸಿನ ಹಾಗೆ- ಈ ಮಾತುಗಳೂ ಸಹ**
**ನಂಬಲು ಅಸಾಧ್ಯವಾಗಿದ್ದವು !**

ಹೌದು ! ಅವೆಲ್ಲ ನಂಬಲು ಅಸಾಧ್ಯವಾಗಿದ್ದರೂ ಪ್ರವಾದಿಗಳು ಅವುಗಳನ್ನು ಪ್ರಾಮಾಣಿಕವಾಗಿ ಬರೆದು ದಾಖಲೆ ಮಾಡಿದರು.

ಆದರೆ ತಕ್ಕ ಸಮಯದಲ್ಲಿ ನಾವು ಏನನ್ನು ಓದಿದ್ದೇವೋ ಅದೆಲ್ಲವೂ ನೆರವೇರುವದು....

## "ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು"

ಹೌದು ! ಇದು ಯಾವುದರ ಬಗ್ಗೆ ಎಂದರೆ ಅದೇ ಪ್ರವಾದಿಗಳ ಬಗ್ಗೆ ಉಲ್ಲೇಖಿಸಲಾಗುತ್ತಿದೆ. ಅವರು "ಶ್ರೇಷ್ಠ ಪುನರುತ್ಥಾನ" ದಲ್ಲಿ ಮನುಷ್ಯ ಪರಿಪೂರ್ಣತೆಯಲ್ಲಿ

ಏಳುವಾಗ ಅವರ ಕಣ್ಣು ಮುಂದೆಯೇ ಅವರು ಬರೆದಿದ್ದ ಎಲ್ಲಾ ರಾಜ್ಯದ ವಾಗ್ದಾನಗಳು ಮತ್ತು ಪುನರ್ ಸ್ಥಾಪನೆಯು (**restitution**) ದರ್ಶನದ ಹಾಗೆ ನೆರವೇರುವದನ್ನು ನೋಡುವರು.

### ಆದರೆ ಏಕೆ ಅವರನ್ನು ಯೌವನಸ್ಥರೆಂದು ಕರೆಯುತ್ತಾರೆ ?

ಯಾಕೆಂದರೆ ನಾವು ಕೆಳಗಿನ ವಾಕ್ಯದಲ್ಲಿ ಮಾನವ ಪರಿಪೂರ್ಣತೆಯ ಬಗ್ಗೆ ಹೀಗೆ ಓದುತ್ತೇವೆ–


**ಯೋಬ 33:25**

**"ಅವನ ದೇಹವು ಬಾಲ್ಯಕ್ಕಿಂತಲೂ ಕೋಮಲವಾಗುವದು, ಅವನು ಪುನಃ ಎಳೆಯತನದ ದಿನಗಳನ್ನು ಅನುಭವಿಸುವನು."**

ಹೌದು ! ಮಾನವ ಪರಿಪೂಣತೆಯೇ ಆ ಯೌವನಸ್ಥರ ಸ್ಥಿತಿ– ಮುದಿ ವಯಸ್ಸು, ಸುಕ್ಕು, ಬಿಳಿಕೂದಲು, ಹಲ್ಲು ಉದುರುವಿಕೆ, ಬಲಹೀನತೆ, ಕನ್ನಡಕ, ಅಪರಿಪೂರ್ಣತೆಗಳು ಇತ್ಯಾದಿ, ಇತ್ಯಾದಿ ಯಾವುದೂ ಇರುವುದಿಲ್ಲ. ಮತ್ತು ಎಲ್ಲಾ ಪ್ರವಾದಿಗಳು ಇಂತಹ ಒಂದು ರೂಪದಲ್ಲಿ ಏಳುವರು.

ಇಸ್ರಾಯೇಲ್ ಜನರಿಗಾಗುವ ಅತ್ಯಾಶ್ಚರ್ಯವನ್ನು ಊಹಿಸಿ ನೋಡಿ! ಅವರು ತಮ್ಮ "ಪಿತೃ"ಗಳಾದ ಅಬ್ರಹಾದ, ದಾವೀದ, ಯಾಕೋಬ, ನೋಹಾ, ದಾನಿಯೇಲ್ ಮುಂತಾದವರನ್ನು

ಬಹಳ ವಯಸ್ಸಾದ, ಬಿಳಿ ಗಡ್ಡ, ಸುಕ್ಕು ಸುಕ್ಕಾದ ಚರ್ಮವುಳ್ಳರಂತೆ ನೋಡದೆ





ಉತ್ಸಾಹಭರಿತ ಪರಿಪೂರ್ಣ ಯುವಕರಂತೆ ಇರುವುದನ್ನು ನೋಡುವಾಗ!

ಪರಿಪೂರ್ಣ ಯುವಕನಾಗಿರುವ ಅಬ್ರಹಾಮನನ್ನು ನೋಡಿದಾಗ ಮುಸಲ್ಮಾನರಿಗಾಗುವ ಆಶ್ಚರ್ಯವನ್ನು ಊಹಿಸಿಕೊಳ್ಳಿ!

ಆ ಸಮಯದಲ್ಲಿ ಈ "ಯುವಕರ" ಗುರುತನ್ನು ದೃಢೀಕರಿಸಲು ಮಾಡಲಾಗುವ ವಿಚಾರಣೆಯನ್ನು ಮತ್ತು ಆ ವಿಚಾರಣಾ ಫಲಕಗಳಲ್ಲಿ ಪ್ರವಾದಿಗಳು ಅವರ ಜೀವನ,ಅವರ ಅನುಭವವನ್ನು ಮತ್ತು ಸತ್ಯವೇದದಲ್ಲಿ ಅವರ ಬಗ್ಗೆ ಏನು ಬರೆಯಲ್ಪಟ್ಟಿದೆಯೋ ಅವುಗಳನ್ನು ದೃಢೀಕರಿಸುವ ವಿಷಯಗಳು ಮಾತ್ರವಲ್ಲದೆ ದೇವರ ವಾಕ್ಯದಲ್ಲಿ ದಾಖಲಾಗಿರುವುದಕ್ಕಿಂತ ಹೆಚ್ಚಿನ ಮತ್ತು ಆಳವಾದ ವಿವರಗಳನ್ನು ವಿವರಿಸುವಾಗ ಅವರ ಮಾತುಗಳನ್ನು ಕೇಳಿ ಆಗುವ ದಿಗ್ಭ್ರಮೆ ಆಶ್ಚರ್ಯವನ್ನು ಊಹಿಸಿಕೊಳ್ಳಿ.

**ನಿಜವಾಗಿಯೂ ಅವೆಲ್ಲವೂ ಇಡೀ ಮಾನವಕುಲಕ್ಕೆ ಅದ್ಭುತವಾದ ಕ್ಷಣಗಳಾಗಿರುವವು.**

ಈಗ ಕೊನೆಯ ನದಿ ಬಗ್ಗೆ ನೋಡೋಣ



# ನದಿ # 4

**ಆದಿಕಾಂಡ 2:14**

**"....ನಾಲ್ಕನೆಯದು ಯೂಫ್ರೇಟೀಸ್ ನದಿ."**

ನಾಲ್ಕನೇ ನದಿಯಾದ ಈ ಯೂಫ್ರೇಟೀಸ್ ನಾಲ್ಕನೇ ಪುನರುತ್ಥಾನ ಹೊಂದಿಕೊಳ್ಳುವವರನ್ನು ಸೂಚಿಸುತ್ತದೆ.

## ಯಾರು ಈ ತರಗತಿಯವರು ?

ಈ ತರಗತಿಯು ಸತ್ಯವೇದದಲ್ಲಿ (ಯೂದ 3ನೇ ವಚನದಲ್ಲಿ) ನಾವು ಓದುವ "ಹುದುವಾಗಿರುವ ರಕ್ಷಣೆ" ಯನ್ನು ಹೊಂದಿಕೊಳ್ಳುವ ಉಳಿದ ಆದಾಮನ ಸಂತತಿಯನ್ನು ಸೂಚಿಸುತ್ತದೆ.

## ಯಾವ ರೀತಿಯ ಪುನರುತ್ಥಾನವನ್ನು ಇವರು ಪಡೆಯುವರು ?

ಇವರು ನಾಲ್ಕನೆ ಪುನರುತ್ಥಾನ ಹೊಂದಿಕೊಳ್ಳುವರು. ಇದನ್ನು "ಸಾಮಾನ್ಯವಾದ ಪುನರುತ್ಥಾನ" ಎಂದೂ ಕರೆಯುವರು.

ಎಲ್ಲರು ಯಾವ ರೀತಿಯ ಮನಸ್ಥಿತಿ ಮತ್ತು ಗುಣಗಳನ್ನು ಸಾಯುವಾಗ ಹೊಂದಿದ್ದರೋ ಅದೇ ರೀತಿಯಾಗಿ ಏಳುವರು.

ಶರೀರ ಹೇಗಿರುವುದೆಂದರೆ ಎದ್ದೇಳುವಾಗ ಅದು ಪೂರ್ಣವಾಗಿರುವುದು **(1 ಕೊರಿಂಥ 15:35-37)** ಅಂದರೆ ಯಾವ ಒಂದು ಅಂಗವಿಕಲತೆಯೂ ಇಲ್ಲದೆ ಇರುವುದು ಮತ್ತು ಕುರುಡರು, ಕಿವುಡರು, ಕುಂಟರು, ಮೂಕರು, ಬುದ್ಧಿಮಾಂದ್ಯರು, ಅಪಘಾತಕ್ಕೀಡಾದವರು, ಯದ್ಧದಲ್ಲಿ ಅಂಗಹೀನರಾದವರು... ಮುಂತಾದವರ ಹಾಗೆ ಯಾವ ಒಂದು ಅಂಗಹೀನತೆಯೂ ಇರುವುದಿಲ್ಲ.



ಆದರೆ ಅವರ ಶರೀರಗಳು ಪರಿಪೂರ್ಣ ಮನುಷ್ಯರ ಹಾಗೆ ಪರಿಪೂರ್ಣವಾಗಿರುವುದಿಲ್ಲ ಆದರೆ ಸತ್ತಾಗ ಯಾವ ವಯಸ್ಸಿನಲ್ಲಿ ಮತ್ತು ಸ್ಥಿತಿಯಲ್ಲಿ ಇದ್ದರೋ ಹಾಗೆಯೇ ಇರುವುದು.

ಇದನ್ನು ಸ್ಪಷ್ಟವಾಗಿ ವಾಕ್ಯದಲ್ಲಿ ತಿಳಿಸಲಾಗಿದೆ–

## ಯೋಬ 19:26-27

**"ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು; ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ....."**

ಹೌದು ! ಆಗ ಸ್ವಯಂ ಗುರುತಿಸುವಿಕೆಗೆ ಒಂದು ಸ್ಪಷ್ಟ ಪುರಾವೆ! ಪಾಪದಲ್ಲಿ ಮತ್ತು ಅಪರಿಪೂರ್ಣತೆಯಲ್ಲಿ ಇದ್ದ ಅದೇ ಸ್ಥಿತಿಗೆ ಈ ಪುನರುತ್ಥಾನವಾಗುವುದು. ಪಶ್ಚಾತ್ತಾಪ, ಸುಧಾರಣೆ ಮತ್ತು ಸತ್ಯಕ್ಕೆ ವಿಧೇಯತೆಯ ಮೂಲಕ ಕ್ರಮೇಣವಾಗಿ ಮಾನವ ಪರಿಪೂರ್ಣತೆಗೆ ಹಿಂದಿರುಗಲು ಆರಂಭಿಸುವರು ಮತ್ತು ಪರಿಶುದ್ಧತೆಯ ರಾಜಮಾರ್ಗದಲ್ಲಿ ಮುಂದುವರಿಯುವರು.

ಇದನ್ನು ಸತ್ಯವೇದದ ವಾಕ್ಯದಲ್ಲಿ ಓದುತ್ತೇವೆ–

## ಯೆಶಾಯ 35:8-10


**" ಅಲ್ಲಿ ರಾಜಮಾರ್ಗವಿರುವದು, ಹೌದು [ಹೋಗಿಬರುವ] ದಾರಿ; ಅದು ಪರಿಶುದ್ಧ ಮಾರ್ಗ ಎನಿಸಿಕೊಳ್ಳುವದು; ಯಾವ ಅಶುದ್ಧನೂ ಅಲ್ಲಿ ನಡೆಯನು, ಅದು ದೇವಜನರಿಗಾಗಿಯೇ ಇರುವದು, ಅಲ್ಲಿ ಹೋಗುವ ಮೂಢನೂ ದಾರಿತಪ್ಪನು. ಸಿಂಹವು ಅಲ್ಲಿರದು, ಕ್ರೂರಜಂತು ಅಲ್ಲಿ ಸೇರದು, ಕಾಣುವದೇ ಇಲ್ಲ ; ಬಿಡುಗಡೆಯಾದವರೇ ಅಲ್ಲಿ ನಡೆಯುವರು; ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿಹೋಗುವವು."**

ಹೌದು ! ಹೀಗೆ ಎಲ್ಲರಿಗೂ ವಾಕ್ಯದಲ್ಲಿ ತಿಳಿಸಲ್ಪಟ್ಟ ಅವಕಾಶ ದೊರೆಯುವದು–

## ಯೋಬ 33:25

**".....ಅವನು ಪುನಃ ಎಳೆಯತನದ ದಿನಗಳನ್ನು ಅನುಭವಿಸುವನು."**

ಹೌದು "ಪುನಃ ಎಳೆತನದ ದಿನಗಳನ್ನು ಅನುಭವಿಸುವನು"ಎಂಬುದು ವಯಸ್ಸಾಗುವ ಮತ್ತು ಸಾಯುವ ಪ್ರಕ್ರಿಯೆಯ ಹಿಮ್ಮುಖವಾಗುವುದನ್ನು ಸೂಚಿಸುತ್ತದೆ.



ಎಲ್ಲಾ ರೀತಿಯ ಅಪರಿಪೂರ್ಣತೆಯ ತೋರ್ಪಡಿಯುವಿಕೆಗಳು ಕ್ರಮೇಣವಾಗಿ ಪೂರ್ಣತೆಯ ಕಡೆಗೆ ಹಿಂತಿರುಗುವುದು. ಉದಾಹರಣೆಗೆ ವಯಸ್ಸಾದವರ ಬಿಳಿ ತಲೆಕೂದಲು ಒಂದೊಂದಾಗಿ ಕಪ್ಪಾಗುತ್ತ ಕ್ರಮೇಣವಾಗಿ ಕಾಲಕಳೆದಂತೆ ತಲೆಯು ಕಪ್ಪು ಕೂದಲಿಂದ ತುಂಬಿರುತ್ತದೆ ಮತ್ತು ಒಂದೂ ಬಿಳಿ ಕೂದಲು ಇರುವುದಿಲ್ಲ.

ಈ ಮಾರ್ಪಡುವಿಕೆ ಶರೀರದ ಪ್ರತಿಯೊಂದೊಂದು ಅಂಗಗಳ ವಿಷಯದಲ್ಲಿಯೂ ಮತ್ತು ಮೆದುಳು ಬಗ್ಗೆ ಹಾಗೆ ಇರುವುದು.

ಆದರೆ ಈ ತರಗತಿಯವರಲ್ಲಿ ಮನತಿರುಗದೆ ಇರುವ ಒಂದು ವರ್ಗದವರೂ ಇರುವರು. ಇವರ ಬಗ್ಗೆ ನಾವು ಓದುತ್ತೇವೆ.

**ಯೆಶಾಯ 26:10**

**"ದುಷ್ಟರನ್ನು ಕರುಣಿಸಿದರೂ ಅವರು ಧರ್ಮ ಜ್ಞಾನವನ್ನು ಪಡೆಯರು; ಯೆಹೋವನ ಮಹಿಮೆಯನ್ನು ಲಕ್ಷಿಸದೆ ಯಥಾರ್ಥವಂತರ ದೇಶದಲ್ಲಿಯೂ**

ಅನ್ಯಾಯವನ್ನಾಚರಿಸುವರು."

ಹೌದು ! ಇವರು ಯಾರೆಂದರೆ ಮನಃಪೂರ್ವಕ ಪಾಪಿಗಳು – ಸತ್ತವರೊಳಗಿಂದ ಎಬ್ಬಿಸಿದರೂ ದೇವರು ಕರುಣೆ ತೋರಿಸಿದರೂ ಅವರು ಪಶ್ಚಾತ್ತಾಪ ಪಡಲು ನಿರಾಕರಿಸುವರು ಹಾಗೂ

➡ ದೇವರಿಗೂ ಅವರ ನೀತಿಗೂ ವಿರೋಧಿಗಳಾಗುವರು..




**ಅವರು ಎರಡನೆಯ ಮರಣಕ್ಕೆ ಹೋಗುವರು ಮತ್ತು ಶಾಶ್ವತವಾಗಿ ಅವರ ಜೀವ ಅಳಿದು ಹೋಗುವುದು!**

☞ ನಕ್ಷೆಯಲ್ಲಿ ನಾವು ನೋಡಿದ A ಮತ್ತು B ಅಂದರೆ ಏನು ?

☞ ಆ ಎರಡು ನದಿಗಳು ಎರಡು ಗುಂಪುಗಳನ್ನು ಸೂಚಿಸುತ್ತದೆ.

ಈ ಎರಡು ಗುಂಪು ಮತ್ತು ಎರಡು ನದಿಗಳಲ್ಲಿ ಏನೋ ವಿಷಯ ಇರುವುದು.

ಹೌದು ! ಪೀಶೋನ್ ಮತ್ತು ಗೀಹೋನ್ ನದಿಗಳು ಈಗ ಭೂಮಿಯಲ್ಲಿ ಹರಿಯುತ್ತಿಲ್ಲ.

ಅವುಗಳು ನಿರ್ಮೂಲವಾಗಿವೆ.

ಆದರೆ ಹಿದ್ದೆಕೆಲ್ (ಟೈಗ್ರೀಸ್) ಮತ್ತು ಯೂಫ್ರೇಟೀಸ್ ನದಿಗಳು ಇಂದು ಕೂಡ ಇರಾಕ್ ದೇಶದಲ್ಲಿ ಹರಿಯುತ್ತಿರುವವು.

**ಇವು ಏನನ್ನು ಸೂಚಿಸುವುದು ?**


ಇವು ದೇವರ ಎರಡು ವಿಧವಾದ ರಕ್ಷಣೆಯನ್ನು ಸೂಚಿಸುವುದು – ಪರಲೋಕದ ರಕ್ಷಣೆ ಮತ್ತು ಭೂಲೋಕದ ರಕ್ಷಣೆ !

ಮೊದಲನೆಯ ಎರಡು ನದಿಗಳು ಎರಡು ರೀತಿಯ ಪುನರುತ್ಥಾನವನ್ನು ಸೂಚಿಸುವುದು ಮತ್ತು ಪರಲೋಕದ ರಕ್ಷಣೆಯನ್ನು ಹೊಂದಿಕೊಳ್ಳುವ ಎರಡು ವರ್ಗದವರನ್ನು ಸೂಚಿಸುವುದು.

ಕೊನೆಯ ಎರಡು ನದಿಗಳು ಕೊನೆಯ ಎರಡು ಪುನರುತ್ಥಾನಗಳನ್ನು ಮತ್ತು ಭೂಲೋಕದ ರಕ್ಷಣೆಯನ್ನು ಹೊಂದಿಕೊಳ್ಳುವ ಎರಡು ವರ್ಗದವರನ್ನು ಸೂಚಿಸುವುದು.

ಓಹ್ ! ಏದೆನ್ ಸೀಮೆಯಲ್ಲಿ ಒಂದು ನದಿ ಹುಟ್ಟಿ ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಗುವ ಒಂದು ಸರಳ ವಿಷಯದಲ್ಲಿದ್ದ ದೇವರ ಮಹಾ ದೈವೀಕ ಯೋಜನೆಯ ಎಂತಹ ಆಶ್ಚರ್ಯಕರವಾದ ವಿಷಯ ನೋಡಿದ್ದೇವೆ!

**ನಿಜವಾಗಿಯೂ ದೇವರ ಮಾತುಗಳು ಆಶ್ಚರ್ಯಕರವಾದದ್ದು !**



… ಆಮೆನ್ …..

For Private Circulation Only

NOT FOR SALE

